ಕರ್ನಾಟಕ ಸರ್ಕಾರ

ಸಂಖ್ಯೆ: ಅಪಜೀ 124 ಇಪಿಒ 2004

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 20.10.2004

ಇಂದ

ಸರ್ಕಾರದ ಕಾರ್ಯದರ್ಶಿ
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ,
ಬೆಂಗಳೂರು-560 001

ಇವರಿಗೆ

ದಿ ಮ್ಯಾನೇಜಿಂಗ್ ಡೈರೆಕ್ಟರ್
ಮೆ|| ದಿ ನಾರಂಜಾ ಸಹಕಾರ ಸಕ್ಕರೆ ಕಾರ್ಖಾನೆ ನಿಯಮಿತ ಬೀದರ್,
ಜಿ ಎನ್ ನಗರ, ಇಮಾಮಪುರ ಗ್ರಾಮ,
ಬೀದರ್ ತಾಲ್ಲೂಕು,
ಬೀದರ್ ಜಿಲ್ಲೆ

ಮಾನ್ಯರೇ,

ವಿಷಯ: ಮೆ|| ದಿ ನಾರಂಜಾ ಸಹಕಾರ ಸಕ್ಕರೆ ಕಾರ್ಖಾನೆ ನಿಯಮಿತ, ಬೀದರ್, ಇವರು 2500 ಟಿಸಿಡಿ ಸಕ್ಕರೆ ಕಾರ್ಖಾನೆ ಸ್ಥಾಪಿಸಲು ಪರಿಸರ ವಿಮೋಚನಾ ಪತ್ರ ನೀಡುವ ಬಗ್ಗೆ.

ಉಲ್ಲೇಖ: ಮೆ|| ದಿ. ನಾರಂಜಾ ಸಹಕಾರ ಸಕ್ಕರೆ ಕಾರ್ಖಾನೆ ನಿಯಮಿತ, ಬೀದರ್ ಇವರ ಪತ್ರ ಸಂಖ್ಯೆ ಪತ್ರ ದಿನಾಂಕ : 13.05.2003 ಮತ್ತು 20.09.2004.

******

ಮೆ|| ದಿ. ನಾರಂಜಾ ಸಹಕಾರ ಸಕ್ಕರೆ ಕಾರ್ಖಾನೆ ನಿಯಮಿತ, ಜಿ.ಎನ್ ನಗರ ಇಮಾಮಪುರ ಗ್ರಾಮ, ಬೀದರ್ ಜಿಲ್ಲೆ ಇವರು 2500 ಟಿಸಿಡಿ ಕಬ್ಬು ಅರೆಯುವ ಸಾಮರ್ಥ್ಯವುಳ್ಳ ಸಕ್ಕರೆ ಕಾರ್ಖಾನೆ ಸ್ಥಾಪಿಸಲು ಉದ್ದೇಶಿಸಿರುತ್ತಾರೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ಇವರ ಪತ್ರ ಸಂಖ್ಯೆ : ಕರಾಮಾನಿಮಂ: ಕೆಎಸ್‌ಪಿಸಿಬಿ/ ಡಿಇಒ/ ಸಿಎಫ್‌ಇ-ಸಿಇಎಲ್‌ಎಲ್/ ಎಇಒ-1 / ಎಸ್‌ಎಸ್‌ಕೆ/ 2001-02 ದಿನಾಂಕ: 20.03.2002ರಲ್ಲಿ ಸದರಿ ಕೈಗಾರಿಕೆಯನ್ನು ವಾಯು ಮತ್ತು ಜಲ ಮಾಲಿನ್ಯದ ದೃಷ್ಟಿಕೋನದಿಂದ ಮುಕ್ತಗೊಳಿಸಿದೆ.

ಕಾರ್ಖಾನೆ ಮತ್ತು ಬಾಯ್ಲರ್‌ಗಳ ನಿರ್ದೇಶಕರು, ಬೆಂಗಳೂರು ಇವರ ಪತ್ರ ಸಂಖ್ಯೆ : ಸಿಎಸ್‌ಎಂಸಿ/ಎಂಎಹೆಚ್‌ಸಿ/ಸಿಆರ್-53/2004-05, ದಿನಾಂಕ : 23.08.2004 ರಲ್ಲಿ ಸದರಿ ಕೈಗಾರಿಕೆಗೆ ಆನ್‌ಸೈಟ್ ಎಮರ್ಜನ್ಸಿ ಪ್ಲಾನ್ ಅನುಮೋದನೆ ಮಾಡಿರುತ್ತಾರೆ.

ಈ ಇಲಾಖೆಯ ಪರಿಸರ ವಿಮೋಚನಾ ಸಮಿತಿಯು ದಿನಾಂಕ : 30.09.2004ರಂದು ನಡೆದ ಸಭೆಯಲ್ಲಿ ಸದರಿ ಕೈಗಾರಿಕೆಯು ಒದಗಿಸಿದ ಮಾಹಿತಿಯನ್ನು ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಕಾರ್ಖಾನೆ ಮತ್ತು ಬಾಯ್ಲರ್‌ಗಳ ನಿರ್ದೇಶಕರು ನೀಡಿರುವ ಕ್ರಮವಾಗಿ ಸಮ್ಮತಿ ಪತ್ರ ಮತ್ತು ಅನುಮೋದನೆ ಕೂಲಂಕುಷವಾಗಿ ಪರಿಶೀಲಿಸಿದ ನಂತರ ಪರಿಸರ ವಿಮೋಚನಾ ಪತ್ರ ನೀಡಲು ಒಪ್ಪಿಕೊಂಡಿದೆ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಕಾರ್ಖಾನೆ ಮತ್ತು ಬಾಯ್ಲರ್‌ಗಳ ನಿರ್ದೇಶಕರು ವಿಧಿಸಿರುವ ಷರತ್ತುಗಳೊಂದಿಗೆ ಈ ಕೆಳಕಂಡ ನಿಬಂಧನೆಗಳನ್ನು ಸಹ ಪರಿಪಾಲಿಸುವಂತೆ ತಿಳಿಸಿ ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆಯು ಮೆ|| ನಾರಂಜಾ ಸಹಕಾರ ಸಕ್ಕರೆ ಕಾರ್ಖಾನೆ ಲಿ., ಜಿ.ಎನ್ ನಗರ ಇಮಾಮಪುರ ಗ್ರಾಮ, ಬೀದರ್ ತಾಲ್ಲೂಕು, ಬೀದರ್ ಜಿಲ್ಲೆ ಇವರಿಗೆ 2500 ಟಿಸಿಡಿ ಸಾಮರ್ಥ್ಯದ ಕಬ್ಬು ಅರೆಯುವ ಸಕ್ಕರೆ ಕಾರ್ಖಾನೆ ಸ್ಥಾಪಿಸಲು ಪರಿಸರ ವಿಮೋಚನಾ ಪ್ರಮಾಣ ಪತ್ರವನ್ನು ಈ ಮೂಲಕ ನೀಡಲಾಗಿದೆ.

1) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸಮ್ಮತಿ ಪತ್ರದಲ್ಲಿ ವಿಧಿಸಿರುವ ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು.
2) ಕಾರ್ಖಾನೆ ಮತ್ತು ಬಾಯ್ಲರ್‌ಗಳ ಇಲಾಖೆಯು ವಿಧಿಸಿರುವ ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು.
3) ಈ ವಿಮೋಚನಾ ಪತ್ರವು 5ವರ್ಷದ ಅವಧಿಯದಾಗಿದ್ದು ನಂತರ ನವೀಕರಿಸಿಕೊಳ್ಳುವುದು.
4) ಈ ಪರಿಸರ ವಿಮೋಚನಾ ಆದೇಶವನ್ನು ರದ್ದುಗೊಳಿಸುವ ಅಥವಾ ಬದಲಾಯಿಸುವ ಹಕ್ಕನ್ನು ಇಲಾಖೆ ಕಾಯ್ದಿರಿಸಿಕೊಂಡಿದೆ.
5) ವ್ಯರ್ಥ ನೀರನ್ನು ಕೈಗಾರಿಕೆಯ ಆವರಣದಿಂದ ಹೊರಗೆ ಬಿಡಬಾರದು.
6) ಮಳೆ ನೀರಿನ ಸಂಗ್ರಹಣೆ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಬೇಕು.
7) ಸದರಿ ಉದ್ದಿಮೆಯವರು ಮೇಲ್ಕಂಡ ಷರತ್ತುಗಳ ಪಾಲನೆಯನ್ನು ಕುರಿತಂತೆ ಪ್ರತಿ 6 ತಿಂಗಳಿಗೊಮ್ಮೆ ಇಲಾಖೆಗೆ ವರದಿಯನ್ನು ಸಲ್ಲಿಸುವುದು.
8) ಉದ್ದಿಮೆಯ ಒಟ್ಟು ಪ್ರದೇಶದ ಶೇಕಡ 33 ಭಾಗದಲ್ಲಿ ಹಸಿರು ಗಿಡಮರಗಳನ್ನು ಬೆಳೆಸುವುದು.

9) ಘನ ತ್ಯಾಜ್ಯ ವಸ್ತುಗಳನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರು ವಿಧಿಸಿರುವ ಷರತ್ತುಗಳನ್ವಯ ವಿಲೇವಾರಿ ಮಾಡಬೇಕು.

ಈ ಪರಿಸರ ವಿಮೋಚನಾ ಪತ್ರ ತಲುಪಿದ ಬಗ್ಗೆ ದಯವಿಟ್ಟು ಸ್ವೀಕೃತಿ ಕಳುಹಿಸುವುದು.

ತಮ್ಮ ನಂಬುಗೆಯ

(ಕೆ. ಜಿ. ಶಶಿಕಲಾ)
ಸರ್ಕಾರದ ಅಧೀನ ಕಾರ್ಯದರ್ಶಿಗಳು (ಪ್ರಭಾರ)
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

ಪ್ರತಿಯನ್ನು:

1) ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು-1.
2) ಕಾರ್ಖಾನೆ ಮತ್ತು ಬಾಯ್ಲರ್‌ಗಳ ನಿರ್ದೇಶಕರು, ಕಾರ್ಮಿಕ ಭವನ, ಡೈರಿ ಸರ್ಕಲ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು-29.
3) ಅಪರ ನಿರ್ದೇಶಕರು, ಭಾರತ ಸರ್ಕಾರ, ಪರಿಸರ ಮತ್ತು ಅರಣ್ಯಗಳ ಮಂತ್ರಾಲಯ, ಪ್ರಾದೇಶಿಕ ಕಚೇರಿ (ದಕ್ಷಿಣ ವಲಯ) ಕೇಂದ್ರೀಯ ಸದನ, 4 ನೇ ಮಹಡಿ, ಇ ಮತ್ತು ಎಫ್ ವಿಭಾಗ, 17 ನೇ ಮುಖ್ಯ ರಸ್ತೆ, 2 ನೇ ಬ್ಲಾಕ್, ಕೋರಮಂಗಲ, ಬೆಂಗಳೂರು-34.
4) ಹಿರಿಯ ನಿರ್ದೇಶಕರು, ತಾಂತ್ರಿಕ ಕೋಶ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.
5) ಕಾರ್ಯದರ್ಶಿ(ಪರಿಸರ), ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಇವರ ಆಪ್ತ ಸಹಾಯಕರು.
6) ಕಂಪ್ಯೂಟರ್ ನಲ್ಲಿ ದಾಖಲಿಸಲು ತಾಂತ್ರಿಕ ಕೋಶಕ್ಕೆ ಪ್ರತಿಯನ್ನು ಕಳುಹಿಸಿದೆ.
7) ರಕ್ಷಾ ಕಡತ.